ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–12.

ಸಂಖ್ಯೆ:ಪಪೂಶಿಇ/ಪರೀಕ್ಷೆ/ನೋಂ&ಫ/2017–18 ದಿನಾಂಕ: 21.10.2017

**ಸುತ್ತೋಲೆ**

ವಿಷಯ: 2017–18ನೇ ಶೈಕ್ಷಣಿಕ ಸಾಲಿನಲ್ಲಿ ಬೋಧನಾ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಮಾಹಿತಿಯನ್ನು ONLINE ಮೂಲಕ ದಾಖಲಿಸುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ, ಅನುದಾನಿತ, ಅನುದಾನರಹಿತ, ವಿಭಜಿತ ಹಾಗೂ ಬಿಬಿಎಂಪಿ ಪದವಿ ಪೂರ್ವ ತರಗತಿಗಳಲ್ಲಿ, ಬೋಧನಾ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಸೇವಾ ವಿವರಗಳ ಮಾಹಿತಿಯನ್ನು ಇಲಾಖಾ ಗಣಕೀಕೃತ ರೆಕಾರ್ಡ್ಸ್‌ನಲ್ಲಿ UPDATE ಮಾಡಲಾಗುತ್ತಿದೆ. ಈ ಸಂಬಂಧ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರ ಸೇವಾ ವಿವರಗಳನ್ನು ಇಲಾಖಾ ವೆಬ್‌ಸೈಟ್ www.pue.kar.nic.in ನ PU online Portalರ 'Evaluator Menu' ಅಂಕಣದಲ್ಲಿ ನೀಡಲಾಗಿರುವ ಅರ್ಜಿಯಲ್ಲಿ ಭರ್ತಿಮಾಡಿ ದಾಖಲಿಸಬೇಕಿರುತ್ತದೆ. ಕಾಲೇಜಿನ ಪ್ರಾಂಶುಪಾಲರ, ಹಾಗೂ ಉಪನ್ಯಾಸಕರ ಮಾಹಿತಿಗಳನ್ನು ಹಿಂದಿನ ವರ್ಷದಲ್ಲಿ ONLINE ಮೂಲಕ ಸಲ್ಲಿಸಿದ್ದರೂ ಪುನ: ಪ್ರಸ್ತುತ ವರ್ಷದಲ್ಲಿ ಎಲ್ಲಾ ಮಾಹಿತಿಗಳನ್ನು ಸೇವಾ ಪುಸ್ತಕದ ಆಧಾರದ ಮೇಲೆ ಕಡ್ಡಾಯವಾಗಿ ದಾಖಲಿಸಬೇಕು.

ಸದರಿ ಮಾಹಿತಿಯನ್ನು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ದಿನಾಂಕ: 10.11.2017ರ ಒಳಗೆ ONLINE ಮೂಲಕ ಸಲ್ಲಿಸಬೇಕಿರುತ್ತದೆ. ಹಾಗೂ ಸಲ್ಲಿಸಿದ ಮಾಹಿತಿಯ ಪೂರ್ಣತೆ ಹಾಗೂ ನಿಖರತೆಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ONLINE ಅರ್ಜಿಯನ್ನು ದಾಖಲಿಸಲು ಅನುಸರಿಸಬೇಕಾದ ಕ್ರಮಗಳು ಈ ಕೆಳಗಿನಂತಿದೆ.

- ಇಲಾಖಾ ವೆಬ್‌ಸೈಟ್ www.pue.kar.nic.in ನ PU online Portal ನಲ್ಲಿ Login ಆದ ನಂತರ ಮೂಡಿಬರುವ ಪುಟದಲ್ಲಿನ 'Evaluator Menu'ನಲ್ಲಿ 'Evaluator' ಅನ್ನು select ಮಾಡುವುದು. ONLINE ಮೂಲಕ ಮಾಹಿತಿಯನ್ನು ಸಲ್ಲಿಸಲು ಅರ್ಜಿ ತೆರೆಯುತ್ತದೆ.
- ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿದ ನಂತರ Submit ನ್ನು Click ಮಾಡುವುದು.
- ಉಪನ್ಯಾಸಕರ ಇತ್ತೀಚಿನ ಕಲರ್ ಪಾಸ್‌ಪೋರ್ಟ್ ಫೋಟೋ ಹಾಗೂ ಸಹಿಯನ್ನು ಸ್ಕ್ಯಾನ್ ಮಾಡಿ Photo Upload ಮಾಡುವುದು.
- ಎಲ್ಲಾ ಉಪನ್ಯಾಸಕರ ಮಾಹಿತಿ ಸಲ್ಲಿಸಿದ ನಂತರ View Evaluator List ನ್ನು Click ಮಾಡುವುದು. ಇಲ್ಲಿ ತಮ್ಮ ಕಾಲೇಜಿಗೆ ಸಂಬಂಧಿಸಿದಂತೆ ದಾಖಲಿಸಿದ ಉಪನ್ಯಾಸಕರ ಸಂಪೂರ್ಣ ಮಾಹಿತಿ ಭಾವಚಿತ್ರ ಸಹಿತ ಮೂಡಿಬರುತ್ತದೆ.
- ಮಾಹಿತಿ ಅಪೂರ್ಣ / ತಪ್ಪಾಗಿದ್ದಲ್ಲಿ Edit option ಮೂಲಕ ಸರಿ ಪಡಿಸುವುದು.
- ದಾಖಲಿಸಿದ ಮಾಹಿತಿಯ ಪ್ರತಿಯನ್ನು ಪಡೆಯಲು Print check listನ್ನು Click ಮಾಡಿ ಪಡೆದು ಪ್ರಾಂಶುಪಾಲರು ಹಾಗೂ ಉಪನ್ಯಾಸಕರು check listನಲ್ಲಿರುವ ಮಾಹಿತಿಗಳನ್ನು ವೈಯಕ್ತಿಕವಾಗಿ ಪರಿಶೀಲಿಸಿ ದೃಢೀಕರಿಸಬೇಕು.

- ಎಲ್ಲಾ ಉಪನ್ಯಾಸಕರ ಮಾಹಿತಿ ಸರಿಯಿರುವುದನ್ನು ಖಚಿತ ಪಡಿಸಿಕೊಂಡ ನಂತರ Submit to PU Adminನ್ನು Click ಮಾಡಿದ್ದಲ್ಲಿ ಸಲ್ಲಿಸಿದ ಮಾಹಿತಿ 'ಇಲಾಖಾ ಗಣಕೀಕೃತ ರೆಕಾರ್ಡ್ಸ್' ನಲ್ಲಿ ದಾಖಲಾಗುತ್ತದೆ.

ಮೌಲ್ಯಮಾಪನ ಕೇಂದ್ರದಲ್ಲಿ ಮೌಲ್ಯಮಾಪಕರ Biometric ಹಾಜರಾತಿಗೆ ಆಧಾರ ಸಂಖ್ಯೆಯನ್ನು ಲಿಂಕ್ ಮಾಡಲಾಗುವುದು ಆದ ಕಾರಣ ಆಧಾರ ಸಂಖ್ಯೆಯನ್ನು ಪರಿಶೀಲಿಸಿ ಕಡ್ಡಾಯವಾಗಿ ಭರ್ತಿ ಮಾಡಬೇಕು.

ಮೌಲ್ಯಮಾಪನ ಕಾರ್ಯದ ಎಲ್ಲಾ ಸಂಭಾವನೆಗಳನ್ನು ಪ್ರತ್ಯೇಕವಾಗಿ ಎಲ್ಲಾ ಮೌಲ್ಯಮಾಪಕರಿಗೆ ಅವರ ವೇತನ ಪಡೆಯುವ ಬ್ಯಾಂಕ್ ಖಾತೆಗೆ ಇಲಾಖೆಯಿಂದ ಪಾವತಿಸಲಾಗುವುದು. ಆದ ಕಾರಣ ಕೇಳಿರುವ ಎಲ್ಲಾ ಬ್ಯಾಂಕ್ ಸಂಬಂಧ ಮಾಹಿತಿಗಳನ್ನು ಪರಿಶೀಲಿಸಿ ಯಾವುದೇ ತಪ್ಪಿಲ್ಲದೆ ದಾಖಲಿಸಬೇಕು.

ಎಲ್ಲಾ ಕಾಲೇಜಿನ ಪ್ರಾಂಶುಪಾಲರು check list ನಲ್ಲಿರುವ ಮಾಹಿತಿಗಳನ್ನು ಪರಿಶೀಲಿಸಿ, ದೃಢೀಕರಿಸಿ ಸಹಿ ಮಾಡಿದ ಪ್ರತಿಯನ್ನು ದಿನಾಂಕ: 15.11.2017ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

Basic Maths, Logic, Home Science, Geology, Education, Psychology, Statistics, Computer Science, Electronics, Karnatak Music, Hindustani Music, Tamil, Telugu, Malayalam, Arabic, French ವಿಷಯಗಳ ಉಪನ್ಯಾಕರ ಕೊರತೆಯಿದ್ದು, ಫಲಿತಾಂಶ ಪ್ರಕಟಿಸುವಲ್ಲಿ ವಿಳಂಬವಾಗುತ್ತಿದೆ. ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ಈ ಎಲ್ಲಾ ವಿಷಯಗಳನ್ನು ಬೋಧಿಸುವ ಕಾಲೇಜುಗಳ ಪ್ರಾಂಶುಪಾಲರು ಕಡ್ಡಾಯವಾಗಿ ಮೇಲ್ಕಂಡ ವಿಷಯಗಳ ಉಪನ್ಯಾಸಕರ ಮಾಹಿತಿಯನ್ನು online Portal ನಲ್ಲಿ ದಾಖಲಿಸಿ ಮೌಲ್ಯಮಾಪನ ಕಾರ್ಯಕ್ಕೆ ಸದರಿ ಉಪನ್ಯಾಸಕರನ್ನು ಕಡ್ಡಾಯವಾಗಿ ಹಾಜರಾಗುವಂತೆ ಆದೇಶಿಸಲು ಸೂಚಿಸಿದೆ.

ಮೌಲ್ಯಮಾಪನ ಕಾರ್ಯಕ್ಕೆ ONLINEನಲ್ಲಿ ಮಾಹಿತಿಗಳನ್ನು ದಾಖಲಿಸದ ಪ್ರಾಂಶುಪಾಲರ ಹಾಗೂ ಉಪನ್ಯಾಸಕರ ಮೇಲೆ ಇಲಾಖೆ ಶಿಸ್ತು ಕ್ರಮ ಜರುಗಿಸಲಾಗುವುದು.

ಸೂಚನೆಗಳು :

**<u>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ:</u>**

- Online ನಲ್ಲಿ ದಾಖಲಿಸುವ ಎಲ್ಲಾ ಮಾಹಿತಿಗಳನ್ನು ಸೇವಾ ಪುಸ್ತಕದಲ್ಲಿರುವಂತೆಯೇ ದಾಖಲಿಸಬೇಕು.
- ಪ್ರಭಾರಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು ತಮ್ಮ ಹುದ್ದೆಯನ್ನು ಉಪನ್ಯಾಸಕರಾಗಿಯೆ ನಮೂದಿಸಬೇಕು.
- Date of entry into service : ಅಂಕಣದಲ್ಲಿ ಸರ್ಕಾರಿ ಸೇವೆಗೆ ಸೇರಿದ ದಿನಾಂಕವನ್ನು ನಮೂದಿಸಬೇಕು.
- Date of entry as lecturer: ಅಂಕಣದಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕ/ ಉಪನ್ಯಾಸಕರಾಗಿ ಪದೋನ್ನತಿ ಪಡೆದ ದಿನಾಂಕವನ್ನು ನಮೂದಿಸಬೇಕು.

**<u>ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ:</u>**

- ಅನುದಾನಿತ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ತಮ್ಮ ಹುದ್ದೆಯು ಇಲಾಖೆಯಿಂದ ಅನುಮೋದಿಸಿರುವ ಬಗ್ಗೆ (Approved / Not Approved) ಮಾಹಿತಿ ನೀಡಬೇಕು. (ಆದೇಶದ ಪ್ರತಿ ಲಗತ್ತಿಸಬೇಕು)
- Date of entry into service : ಅಂಕಣದಲ್ಲಿ ಹುದ್ದೆ ಇಲಾಖೆಯಿಂದ ಅನುಮೋದನೆ ಹೊಂದಿದ ದಿನಾಂಕವನ್ನು ನಮೂದಿಸಬೇಕು.

**ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಗೆ:**

- ಉಪನ್ಯಾಸಕರು ಅರೆಕಾಲಿಕ ಅಥವ ಪೂರ್ಣ ಸಮಯ (part time/full time ) ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಬೇಕು.
- ಅರೆಕಾಲಿಕ ಉಪನ್ಯಾಸಕರು ಬೇರೆ ಬೇರೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಒಂದೆ ಕಾಲೇಜಿನಲ್ಲಿ ಮೌಲ್ಯಮಾಪನ ಕಾರ್ಯಕ್ಕೆ online ಮೂಲಕ ಮಾಹಿತಿ ದಾಖಲಿಸಬೇಕು.

**ಬಿ.ಬಿ.ಎಂ.ಪಿ ಪದವಿ ಪೂರ್ವ ಕಾಲೇಜುಗಳಿಗೆ:**

- ಉಪನ್ಯಾಸಕರಾಗಿ ನೇರ ನೇಮಕಾತಿ ಅಥವ ಪದೋನ್ನತಿ ಪಡೆದಿರುವ ಬಗ್ಗೆ ಮಾಹಿತಿ ನೀಡಬೇಕು.

**ವಿಭಜಿತ ಪದವಿ ಪೂರ್ವ ಕಾಲೇಜುಗಳಿಗೆ:**

- ಉಪನ್ಯಾಸಕರು ಅರೆಕಾಲಿಕ ಅಥವ ಪೂರ್ಣ ಸಮಯ (part time/full time ) ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ನೀಡಬೇಕು.

21/10/17

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ (ಅನುಷ್ಠಾನಕ್ಕಾಗಿ).
3. ಸಹಾಯಕ ನಿರ್ದೇಶಕರು, ಇ-ಆಡಳಿತ ಪಪೂಶಿಇ (ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು).